**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 16.11.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ 1 ರಿಂದ 5 ರವರ ಪರವಾಗಿ ಶ್ರೀ.ಎಂ.ಬಿ.ಹೆಚ್. ವಕೀಲರಿಂದ.**

ನಮ್ಮ ಕುಟುಂಬದ ಹೆಸರಿನಲ್ಲಿ ಕುಟುಂಬದ ಆಹಾರ ಪಡಿತರ ಚೀಟಿ ಇರುವದು. ಆ ದಾಖಲೆಯಲ್ಲಿ ಪ್ರತಿವಾದಿ 1 ರವರ ಹೆಸರೂ ಸಹ ದಾಖಲು ಇರುವದು. ಆ ದಾಖಲೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿರುವೇನು. ಈ ದಾಖಲೆಯನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಮತ್ತು ಪ್ರತಿವಾದಿ 1 ರವರು ಕೂಡಿ ಒಂದೇ ಮನೆಯಲ್ಲಿ ವಾಸವಾಗಿರುವ ಬಗ್ಗೆ ಸರ್ಕಾರಿ ದಾಖಲೆಗಳು ಇರುವವು. ಆ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುವೇವು. ನಮ್ಮ ಹೆಸರಿನಲ್ಲಿರುವ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿರುವೇನು. ನನ್ನ ಮತ್ತು ಪ್ರತಿವಾದಿ 1 ರವರ ಮದ್ಯೆ ವಿವಾಹವಾಗಿರುವದು ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ವಿವಾಹವಾದ ಸಮಯದಲ್ಲಿ ಯಾವುದೇ ಕಾನೂನುಗಳು ಇರಲಿಲ್ಲ. ಗುರುಹಿರಿಯರ ಸಮಕ್ಷಮದಲ್ಲಿ ಮತ್ತು ನಮ್ಮ ಕುಟುಂಬದ ಹಿರಿಯರ ಸಮಕ್ಷಮದಲ್ಲಿ ನಮ್ಮ ವಿವಾಹವಾಗಿರುವದು. ಈ ವಿವಾಹವಾದ ಬಗ್ಗೆ ವಿವಾಹದ ಆಮಂತ್ರಣ ಪತ್ರಿಕೆಯಾಗಲೀ ಹಾಗೂ ವಿವಾಹದ ಯಾದಿ ಆಗಲೀ ಹಾಜರುಪಡಿಸಿರುವುದಿಲ್ಲ. ಯಾವುದೇ ಕಾಲಕ್ಕೂ ನನ್ನ ವಿವಾಹ ಪ್ರತಿವಾದಿ 1 ರವರ ಜೊತೆ ಆಗಿರುವುದಿಲ್ಲ, ಆದರೂ ಸಹಿತ ನಾನು ಆತನ ಹೆಂಡತಿ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನನ್ನ ಆಧಾರ ಕಾರ್ಡಗೆ ಸಂಬಂಧಪಟ್ಟಂತೆ ನಾನೇ ಮಾಹಿತಿ ನೀಡಿದ್ದೇನೆಂದರೆ ಸರಿ. ನನ್ನ ಆಧಾರ ಕಾರ್ಡನಲ್ಲಿ ನಾನು ಲೋಕಾಪೂರದ ವಾರ್ಡ ನಂ. 5 ರಲ್ಲಿ ವಾಸಿಸುತ್ತಿರುವುದು ಎಂದು ನಮೂದು ಇರುವದ ಎಂದರೆ ಸರಿ. ಪ್ರತಿವಾದಿ 1 ರವರ ಹೆಸರಿನಲ್ಲಿ ಲೋಕಾಪೂರ ವಿಳಾಸದಲ್ಲಿ ಆಧಾರ ಕಾರ್ಡ, ಕುಟುಂಬದ ಆಹಾರ ಪಡಿತರ ಚೀಟಿ ಬೇರೆ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿ 1 ರವರ ವಿವಾಹವಾದ ನಂತರ ಕೂಡಿ ಇದ್ದ ಸಮಯದಲ್ಲಿ ತೆಗೆಸಿದ ಪೋಟೋಗಳು ಇರುವವು. ಆ ಪೋಟೋಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುವೇನು. ಈ ಸಂಗತಿಯನ್ನು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪ್ರತಿವಾದಿ 1 ರವರ ವಿವಾಹ ಪ್ರತಿವಾದಿ 2 ರವರ ಜೊತೆ ಆಗಿರುವದು ಎಂದರೆ ಸರಿಯಲ್ಲ. ಇವರ ವೈವಾಹಿಕ ಜೀವನದಿಂದ ಪ್ರತಿವಾದಿ 3 ರವರು ಜನ್ಮ ತಾಳಿರುವಳು ಎಂದರೆ ಸಾಕ್ಷಿ ನುಡಿಯುವುದೇಂದರೆ ಪ್ರತಿವಾದಿ 1 ರವರು ಪ್ರತಿವಾದಿ 2 ರವರನ್ನು ಇಟ್ಟುಕೊಂಡಿರುವರು ಎಂದು ಉತ್ತರಿಸಿರುವರು. ನನ್ನ ಮತ್ತು ಪ್ರತಿವಾದಿ 1 ರವರ ವೈವಾಹಿಕ ಜೀವನದಿಂದ ವಾದಿ 1 ಮತ್ತು ಮೃತ ಹೊಳೆಪ್ಪ ಎಂಬ ಇಬ್ಬರು ಮಕ್ಕಳು ಜನ್ಮ ತಾಳಿರುವರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ವಾದಿಯರಿಗೆ ದಾವಾ ಆಸ್ತಿಯಲ್ಲಿ ಪ್ರತಿವಾದಿ 1 ರವರ ಪಾಲಿಗೆ ಬಂದಂತಹ ಆಸ್ತಿಗಳಲ್ಲಿ ಪಾಲು ಇರುವದು ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಬರೆಸಿ ಹಾಕಲು ನಾನೇ ಮಾಹಿತಿ ನೀಡಿರುವೇನು. ಪ್ರತಿವಾದಿ 1 ರವರು ಪ್ರತಿವಾದಿ 2 ರವರ ಜೊತೆ ಅನೈತಿಕ ಸಂಬಂಧ ಹೊಂದಿರುವರು ಎಂದು ನಾನು ಸುಳ್ಳು ಹೇಳಿ ಬರೆಸಿದ್ದೇನೆಂದರೆ ಸರಿಯಲ್ಲ. ಅನೈತಿಕ ಸಂಬಂಧ ಹೊಂದಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವೇನು. ಆದರೆ ಯಾವ ದಾಖಲೆ ಎಂಬುದರ ಬಗ್ಗೆ ನನಗೆ ಹೇಳಲು ಆಗುವುದಿಲ್ಲ.

ಪ್ರತಿವಾದಿ 1 ಮತ್ತು 2 ರವರು ತಮ್ಮ ಧರ್ಮ ಸಂಪ್ರದಾಯದ ಪ್ರಕಾರ ಗೋಕಾಕ ತಾಲೂಕಿನ ಕಳ್ಳಿಗುದ್ದಿ ಗ್ರಾಮದಲ್ಲಿ ವಿವಾಹವಾಗಿರುವರು ಎಂದರೆ ಸರಿಯಲ್ಲ. ಇವರ ವಿವಾಹದ ಕಾರ್ಯಕ್ರಮದಲ್ಲಿ ಪುರೋಹಿತ ಅಂತ ಕಳ್ಳಿಗುದ್ದಿ ಗ್ರಾಮದ ಗುರುಲಿಂಗಯ್ಯ ಎಂಬುವವರು ಭಾಗವಹಿಸಿದ್ದರು ಎಂದರೆ ಸರಿಯಲ್ಲ. ಇವರ ವಿವಾಹವಾಗಿ ಈಗ ಸುಮಾರು 45 ವರ್ಷಗಳಾಗಿರುವವು ಎಂದರೆ ಸರಿಯಲ್ಲ. ಇವರ ವಿವಾಹದ ಕಾರ್ಯಕ್ರಮದಲ್ಲಿ ತಮ್ಮ ಧರ್ಮ ಸಂಪ್ರದಾಯದ ಪ್ರಕಾರ ಕಂಬಳಿ ಹಾಸುವದು, ಹಾಸಕ್ಕಿ ಒಯ್ಯುವದು, ಸುರಗಿ ಸುತ್ತುವದು, ವಧುವರರಿಗೆ ಅರಿಶಿಣ ಹಚ್ಚುವದು, ಸುರಗಿ ನೀರು ಹಣಿಸುವುದು, ಹೊಸಬಟ್ಟೆ ತೋಡಿಸುವದು, ಬಾಸಿಂಗ ತೋಡಿಸುವದು, ವಧು ವರರನ್ನು ಕುರ್ಚಿಯಲ್ಲಿ ಕೂಡಿಸಿ ಪ್ರತಿ ಗಂಡ ಹೆಂಡಿರ ಧೋತರ ಪಂಚೆಗೆ ಮತ್ತು ಸೀರೆ ಸೇರಗಿಗೆ ಗಂಟು ಕಟ್ಟಿದ್ದು, ಸ್ವಾಮಿಗಳು ಶಾಸ್ತ್ರೋಕ್ತವಾಗಿ ಮಂತ್ರಪಠಣ ಮಾಡಿ 1 ನೇ ಪ್ರತಿವಾದಿಯ ಕೈಯಲ್ಲಿ ತಮ್ಮ ಹೆಂಡತಿಯಾದ 2 ನೇ ಪ್ರತಿವಾದಿ ಕೊರಳಿಗೆ ತಾಳಿ ಕಟ್ಟಲು ಕೊಟ್ಟಿದ್ದು ಆ ಪ್ರಕಾರ ತಾಳಿ ಕಟ್ಟಿದ್ದು ಎಲ್ಲರ ಜನರು ಅಕ್ಷತೆ ಹಾಕಿ ಆಶೀರ್ವದಿಸಿ ಭೋಜನ ಮಾಡಿಕೊಂಡು ಹೋಗಿದ್ದು, ಮದುವೆಯಾದ ನಂತರ ಪ್ರತಿವಾದಿ 1 ಮತ್ತು 2 ರವರು ದೇವರಿಗೆ

ನಮಸ್ಕರಿಸಿ ಎಲ್ಲ ಗುರುಹಿರಿಯರ ಆಶೀರ್ವಾದ ಪಡೆದುಕೊಂಡಿದ್ದು ಇವರ ವೈವಾಹಿಕ ಜೀವನದಿಂದ ಅಂದಾಜು 40 ವರ್ಷಗಳ ಹಿಂದೆ ಪ್ರತಿವಾದಿ 3 ಜನಿಸಿದ್ದು, ಅವಳೂ ಕೂಡ 2 ಗಂಡು ಮಕ್ಕಳಿಗೆ ಹಾಗೂ 3 ಜನ ಹೆಣ್ಣು ಮಕ್ಕಳಿಗೆ ಜನ್ಮ ನೀಡಿರುತ್ತಾಳೆಂದರೆ ಸರಿಯಲ್ಲ.

ಪ್ರತಿವಾದಿ 2 ರವರು ಸರ್ವೇ ನಂಬರ 44/1 ರ ಜಮೀನನ್ನು ಪ್ರತಿವಾದಿ 3 ರವರಿಗೆ ನೊಂದಾಯಿತ ದಾನಪತ್ರದ ಮೂಲಕ ನೀಡಿರುವರು ಎಂದರೆ ಅದು ನಿಜವಿರುವುದಿಲ್ಲ ಎಂದು ಸಾಕ್ಷಿ ಉತ್ತರಿಸಿರುವರು. ಪ್ರತಿವಾದಿ 1 ರವರು ಸರ್ವೇ ನಂಬರ 44/4 ರ ಜಮೀನನ್ನು ಪ್ರತಿವಾದಿ 3 ರವರಿಗೆ ನೊಂದಾಯಿತ ದಾನಪತ್ರದ ಮೂಲಕ ನೀಡಿರುವರು ಎಂದರೆ ಅದು ನಿಜವಿರುವುದಿಲ್ಲ ಎಂದು ಸಾಕ್ಷಿ ಉತ್ತರಿಸಿರುವರು. ಈ ದಾನಪತ್ರಗಳ ಆಧಾರದ ಮೇರೆಗೆ ಈ ಜಮೀನುಗಳಿಗೆ ಪ್ರತಿವಾದಿ 3 ರವರಿಗೆ ಹಕ್ಕು ಬದಲಾವಣೆಯಾಗಿ ಅವರ ಹೆಸರಿನಲ್ಲಿ ಪಹಣಿ ಪತ್ರಿಕೆಗಳು ಇರುವವು ಎಂದರೆ ಸರಿಯಲ್ಲ. ಈ ಎರಡೂ ಜಮೀನುಗಳಿಗೆ ಪ್ರತಿವಾದಿ 3 ರವರೆ ಕಬ್ಜೆ ಹೊಂದಿ ಮಾಲೀಕರಾಗಿರುವರು ಎಂದರೆ ಸರಿಯಲ್ಲ. ಈ ದಾನಪತ್ರಗಳನ್ನು ಪ್ರಶ್ನಿಸುವ ಅಧಿಕಾರ ನಿಮಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಆಧಾರ ಗುರುತಿನ ವಿಳಾಸ ಮೊದಲಿನಿಂದಲೂ ಲೋಕಾಪೂರ ಗ್ರಾಮದ್ದೇ ಇರುವದು. ನನ್ನ ಆಧಾರ ಗುರುತಿನ ಚೀಟಿಯಲ್ಲಿ ನನ್ನ ಗಂಡನ ಹೆಸರು ಗಿರಿಯಪ್ಪ ಎಂದು ತಪ್ಪಾಗಿ ನಮೂದಿಸಿದ್ದೇನೆಂದರೆ ಸರಿಯಲ್ಲ.

ಈ ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಹೊಳೆಪ್ಪನ ಆಧಾರ ಗುರುತಿನ ಚೀಟಿಯಲ್ಲಿ ತಂದೆಯ ಹೆಸರು ಸಿದ್ದಪ್ಪ ಅಂತ ನಮೂದು ಇರುವದು ಎಂದರೆ ಸರಿ. ಆದರೆ ನೆಮ್ಮದಿ ಕೇಂದ್ರದವರುತಪ್ಪಾಗಿ ಅವರ ತಂದೆಯ ಹೆಸರು ನಮೂದು ಮಾಡಿರುವರು. ಈ ಆಧಾರ ಕಾರ್ಡನ್ನು ತಯಾರು ಮಾಡುವ ಸಮಯದಲ್ಲಿ ನಾವೇ ಮಾಹಿತಿ ನೀಡಿ ತಯಾರು ಮಾಡಿಸಿರುತ್ತೇವೆಂದರೆ ಸರಿ. ಈತನ ಆಧಾರ ಗುರುತಿನ ಚೀಟಿಯಲ್ಲಿ ತಂದೆಯ ಹೆಸರು ಸಣ್ಣಸಿದ್ದಪ್ಪ ಲೋಕಾಪೂರ-, ಬಾಗಲಕೋಟ ಅಂತ ಇರುವುದು ನಿಜವಿರುವುದಿಲ್ಲ. ಹೊಳೆಪ್ಪ ನನ್ನ ಮಗನಾಗಿರುವುದಿಲ್ಲ, ಆತ ಸಿದ್ದಪ್ಪನ ಮಗ ಎಂದರೆ ಸರಿಯಲ್ಲ. ವಾದಿ 2 ರವರ ಆಧಾರ ಗುರುತಿನ ಚೀಟಿ ಈದಾವೆ ದಾಖಲು ಮಾಡಿದ ನಂತರ ತಯಾರು ಮಾಡಿಸಿರುವುದು ಎಂದರೆ ಸರಿ. ಈ ದಾಖಲೆಯನ್ನು ತಯಾರು ಮಾಡಲು ತಪ್ಪು ಮಾಹಿತಿ ಕೊಟ್ಟು ತಯಾರು ಮಾಡಿಕೊಂಡಿದ್ದೇವೆಂದರೆ ಸರಿಯಲ್ಲ.

ವಾದಿ 3 ರವರ ಆಧಾರ ಗುರುತಿನ ಚೀಟಿಯಲ್ಲಿನ ಸಂಗತಿಗಳು ನಿಜವಿರುವುದಿಲ್ಲ ಎಂದರೆ ಸರಿಯಲ್ಲ. ಹೊಳೆಪ್ಪನ ಅಡ್ಡಹೆಸರು ಲೋಕಾಪುರ ಅಂತ ಇರುವುದರಿಂದ ಆತ ಕಣಬೂರು ಕುಟುಂಬಕ್ಕೆ ಯಾವುದೇ ಸಂಬಂಧ ಇರುವುದಿಲ್ಲ ಎಂರೆ ಸರಿಯಲ್ಲ. ಈ ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಆಧಾರ ಗುರುತಿನ ಚೀಟಿಗಳಲ್ಲಿ ನಮಗೆ ಅನುಕೂಲವಾಗುವ ಹಾಗೆ ಮಾಹಿತಿಯನ್ನು ನೀಡಿ ಅವುಗಳನ್ನು ಸೃಷ್ಟಿಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಸರ್ವೇ ನಂಬರುಗಳು ನನಗೆ ಹೇಳಲು ಆಗುವುದಿಲ್ಲ. ದಾವಾ ಜಮೀನುಗಳ ಚೆಕಬಂದಿಯೂ ಸಹ ನನಗೆ ನೆನಪು ಇರುವುದಿಲ್ಲ. ನಾನು ಪ್ರತಿವಾದಿ 1 ರವರ ಹೆಂಡತಿಯಾಗದೇ ಇದ್ದರೂ ಸಹಿತ ದಾವಾ ಆಸ್ತಿಗಳನ್ನುಎತ್ತಿಹಾಕುವ ಸಲುವಾಗಿ ಈ ಸುಳ್ಳು ದಾವೆಯನ್ನು ದಾಖಲು ಮಾಡಿ ಸುಳ್ಳು ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಪ್ರತಿವಾದಿ 1 ರವರ ಹೆಂಡತಿಯಾಗಿರುವುದಿಲ್ಲ. ಆತನ ಜೊತೆ ವಿವಾಹವಾಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ಪ್ರತಿವಾದಿ 2 ರವರ ಜೊತೆ ಹಿಂದೂ ಸಂಪ್ರದಾಯದ ಪ್ರಕಾರ ವಿವಾಹ ಮಾಡಿಕೊಂಡಿದ್ದು ಅವಳು ಆತನ ಹೆಂಡತಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ**

ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ